Sri H. SIDDAVEERAPPA (Minister for Health).—

(*a*) Survey is not undertaken at present.

(*b*) and (*c*) Facilities are provided for getting treatment for T. B. patients in the Kolar District Sanatorium.

ಶ್ರೀ ಚೌಡರೆಡ್ಡಿ.—ಕೋಲಾರ ಆಸ್ಪತ್ರೆಯಲ್ಲಿ ಆಕಾಮಡೇಷನ್ ಇಲ್ಲದೆ ಬಹಳ ಜನ ಬಡವರು ನರಳುತ್ತಿದ್ದಾರೆ ಮತ್ತು ಅವರಿಗೆ ತೊಂದರೆಯಾಗುತ್ತಿದೆ. ಈ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಇದು ಈಚೆಗೆ ಎಂದರೆ 1971 ರಲ್ಲಿ ಪ್ರಾರಂಭವಾಗಿದೆ. ಇನ್ನೂ ಹೆಚ್ಚಿಗೆ ಅನುಕೂಲಗಳು, ಬೆಡ್ ಸ್ಪೇಸಿಂಗ್ ಬೇಕು ಎನ್ನುವುದಾದರೆ ಮಾಡೋಣ.

Measures to Prevent Leprosy in Chintamani Taluk

480. Sri CHOWDA REDDY (Chintamani).—

Will the Minister for Health be pleased to state :—

(*a*) the number of leprosy patients in Chintamani Taluk during the last three years;

(*b*) the medical facilities provided to them by Government;

(*c*) whether it has come to the notice of the Government that this disease is spreading fast recently;

(*d*) whether Government would take any measures to prevent this ?

Sri H. SIDDAVEERAPPA (Minister for Health).—

(*a*) The details are not available as house to house survey has not been done. However 85 leprosy patients have come to the Hospital for treatment.

(*b*) The Health Units in that area give treatment and tablets (Depsone tablets) to the leprosy patients and suitable instructions have been issued in this behalf.

(*c*) No. Survey will be conducted.

(*d*) Recently S.E.T. Centre has been sanctioned and the same has been established at Nagavale village of Kolar taluk. Leprosy Control Centres have been established at Gouribidanur, Gudibande and Bagepalli and survey has been conducted. The question of establishing a Leprosy Centre in Chintamani Taluk will be considered after the survey.

ಶ್ರೀ ಚೌಡ ರೆಡ್ಡಿ.—ತಮ್ಮ ಉತ್ತರದಲ್ಲಿ 85 ಜನ ಲೆಪ್ರಸಿ ಪೇಷಂಟುಗಳು ಟ್ರೀಟ್‌ಮೆಂಟ್‌ಗೆ ಬಂದಿರುತ್ತಾರೆ ಎಂದು ಹೇಳಿದ್ದೀರಿ, ರಾಗವಳ್ಳಿ ಎಂಬ ಊರಲ್ಲಿ ಇಂಥ ಕೇಸುಗಳು 100 ಇವೆ ಯೆಂದು ತಮ್ಮ ಗಮನಕ್ಕೆ ಬಂದಿದೆಯೇ?

† ಶ್ರೀ ಎಚ್. ಸಿದ್ದವೀರಪ್ಪ.—ನನ್ನ ಗಮನಕ್ಕೆ ಬಂದಿಲ್ಲ, ವಿಚಾರ ಮಾಡುತ್ತೇನೆ.

ಶ್ರೀ ಚೌಡ ರೆಡ್ಡಿ.—ನಮ್ಮ ತಾಲ್ಲೂಕಿನಲ್ಲಿ ಸರ್ವೆ ಮಾಡಿದರೆ ಇಂಥ ಕೇಸುಗಳು 800ಕ್ಕೂ ಮೇಲೆ ಫಿಕ್ಕುತ್ತವೆ. ಸರ್ವೆ ಮಾಡಿಸುತ್ತಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇದನ್ನು ಕಂಟ್ರೋಲ್ ಮಾಡುವುದಕ್ಕೆ ಬೇರೆ ಏನು ಸ್ಪೆಷಲ್ ತೆಗೆದುಕೊಳ್ಳಬೇಕು, ಎಷ್ಟು ಇಂಥ ಕೇಸುಗಳು ಇವೆ ಎನ್ನುವುದನ್ನು ಸರ್ವೆ ಮಾಡಿಸುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ.—ರೋಗಿಗಳನ್ನು ಆಸ್ಪತ್ರೆಗೆ ಸೇರಿಸುವಾಗ ಯಾರು ನಿಜವಾಗಿಯೂ ಈ ಕಾಯಿಲೆಯಿಂದ ನರಳುತ್ತಿರುವವರೋ ಅಂಥವರಿಗೆ ಪ್ರಾಶಸ್ತ್ಯ ಕೊಡುತ್ತಿಲ್ಲ. ಕೇವಲ ಇನ್‌ಫ್ಲೂಯನ್ಸ್ ಅನ್ನು ಯಾರು ಉಪಯೋಗಿಸುತ್ತಾರೋ ಅವರನ್ನು ಅಡ್ಮಿಟ್ ಮಾಡಿಕೊಂಡು, ಬಡ ನಿರ್ಗತಿಕರನ್ನು ಅಡ್ಮಿಟ್ ಮಾಡಿಕೊಳ್ಳುವುದಕ್ಕೆ 8-10 ದಿವಸ ಅಡ್ಡಾಡಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ತಮ್ಮ ಕಾಲದಲ್ಲಿಯಾದರೂ ಇದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಸ್ಪೆಸಿಫಿಕ್ ಆಗಿ ಕೇಸ್ ಅಂಥಾದ್ದು ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ತಕ್ಷಣ ವಿಚಾರ ಮಾಡಿ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಕುಷ್ಠರೋಗ ಇರುವುದಕ್ಕೆ ಮೂಲ ಭೂತವಾದ ಕಾರಣ ಏನು ? ಏನ್ನುವುದನ್ನು ಪರಿಶೀಲನೆ ಮಾಡಿಸುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಸ್ಟೇಟ್‌ನಲ್ಲಿ ಕೆಲವು ಭಾಗದಲ್ಲಿ ರಿಪ್ಪಸಿ ಕಾಯಿಲೆ ಬಹಳ ವರ್ಷಗಳಿಂದ ಇದೆ. ಅದನ್ನು ಕಂಟ್ರೋಲ್ ಮಾಡುವುದಕ್ಕೆ ಗವರ್ನಮೆಂಟ್ ಆಫ್ ಇಂಡಿಯಾದವರು ಸ್ಪೆಷಲ್ ಸ್ಕೀಮ್ಸ್ ಅನ್ನು ಇಟ್ಟಿದ್ದಾರೆ. ನಮ್ಮ ಸ್ಟೇಟಿನಲ್ಲಿಯೂ ಕೆಲವು ಭಾಗಗಳಲ್ಲಿ ಇದು ರೋಕಲೈಸ್ ಆಗಿದೆ. ಇದನ್ನು ಯಾವ ರೀತಿ ಕಂಟ್ರೋಲ್ ಮಾಡಬೇಕು ಎನ್ನುವುದಕ್ಕೆ ಸ್ಪೆಸಿಫಿಕ್ ಟ್ರೀಟ್‌ಮೆಂಟ್ ಇದೆ, ಅದಕ್ಕೆ ಎಕ್ಸ್‌ಪರ್ಟ್ಸ್ ಇದ್ದಾರೆ. ಸ್ಪೆಸಿಫಿಕ್ ವಾಕ್ಸಿನೇಷನ್ ಸಪ್ಲೈ ಮಾಡಿ, ಅದು ಹುಟ್ಟದ ಹಾಗೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ನಮ್ಮ ಡಿಪಾರ್ಟ್‌ಮೆಂಟಿನವರು ತೆಗೆದುಕೊಳ್ಳುತ್ತಾರೆ. ಅದರ ಸಂಪೂರ್ಣ ವಿವರ ಬೇಕಾದರೆ, ಅದನ್ನು ತಮಗೆ ಸ್ಪೆಷಲ್ ಆಗಿ ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಕುಷ್ಠ ರೋಗ ಕೆಲವು ಪ್ರದೇಶಗಳಲ್ಲಿ ರೋಕಲೈಸ್ ಆಗಿದೆ ಎಂದು ಹೇಳಿದಿರಿ, ಅಂಥ ಪ್ರದೇಶದಲ್ಲಿ ಅಧಿಕ ಪ್ರಮಾಣದಲ್ಲಿ ಆ ಕಾಯಿಲೆ ಇರುವುದಕ್ಕೆ ಕಾರಣ ಏನು ಎಂದು ಕಂಡುಹಿಡಿಯುತ್ತಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ರೀಸರ್ಚ್ ಮಾಡುತ್ತಿರುತ್ತಾರೆ. ಆ ಏರಿಯಾದಲ್ಲಿ ಏನೂ ಕಾರಣದಿಂದ ಈ ಕಾಯಿಲೆ ಬರುತ್ತಾ ಇದೆ, ಏತಕ್ಕೆ ರೋಕಲೈಸ್ ಆಗಿದೆ, ಎಂದು. ಉದಾಹರಣೆಗೆ ಕೊಳ್ಳೆಗಾಲ ತಾಲ್ಲೂಕು, ಟೀ ನರಸೀಪುರ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಹರಿಹರ ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿ ಕೆಲವು ಭಾಗ ರೋಕಲೈಸ್ ಆಗಿದೆ. ಪರ್ಟಿಕ್ಯುಲರ್ ಹ್ಲೇಸ್‌ನಲ್ಲಿ ರೋಕಲೈಸ್ ಆಗುವುದಕ್ಕೆ ಏನು ಕಾರಣ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಇದು ಒಂದು ತರಹ ಗುಪ್ತ ಖಾಯಿಲೆ.

ಶ್ರೀ ಎಚ್. ಡಿ. ದೇವೇಗೌಡ.—ನೀವು ಹೆರ್ ಮಿನಿಸ್ಟರ್ ಆದಮೇಲೆ ಹರಿಹರದಲ್ಲಿ ಈ ಖಾಯಿಲೆ ಹೇಗೆ ಇದೆ ?

ಶ್ರೀ ಎಚ್. ಸಿದ್ದವೀರಪ್ಪ.—25 ವರ್ಷಗಳಿಂದಲೂ ಈ ಖಾಯಿಲೆ ಇದೆ. ನಾನು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ ಆಗಿದ್ದಾಗಾಯಿತು ಹೇಗೆ ಇದನ್ನು ಕಂಟ್ರೋಲ್ ಮಾಡಬೇಕು ಎಂದು ನೋಡುತ್ತಿದ್ದಾರೆ, ಆದರೆ ಏನೂ ಆಗಲಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಬೀದಿಯಲ್ಲಿ ಕೂತುಕೊಂಡು, ಬಸ್‌ನಲ್ಲಿ ಈ ಖಾಯಿಲೆಯನ್ನು ತೋರಿಸಿಕೊಂಡು ಭಿಕ್ಷಾಟನೆ ಮಾಡಿಕೊಂಡು ದುಡ್ಡನ್ನು ಜನಗಳಿಂದ ಪಡೆಯುತ್ತಾರೆ. ಇದನ್ನೇ ಒಂದು ವೃತ್ತಿಯಾಗಿಟ್ಟುಕೊಂಡು ಜೀವನ ಮಾಡುತ್ತಾರೆ, ಆಸ್ಪತ್ರೆಗೆ ಹೋಗಿ ಗುಣ ಪಡಿಸಿಕೊಳ್ಳುವುದಕ್ಕೆ ಇಷ್ಟವಿಲ್ಲ. ಇದು ಸಾಂಕ್ರಾಮಿಕ ರೋಗ ಎಂದು ಹೇಳುತ್ತೀರಿ, ಒಬ್ಬರಿಂದ ಒಬ್ಬರಿಗೆ ಹರಡುವುದರಿಂದ ಇದನ್ನು ಕಂಟ್ರೋಲ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಈ ರೀತಿ ಅವರು ಇರುವುದು ಕಾನೂನಿಗೆ ವಿರೋಧ. ಒಂದು ವೇಳೆ ಈ ರೀತಿ ಇದ್ದರೆ ಅವರನ್ನು ತೆಗೆದುಕೊಂಡು ಹೋಗಿ ಸೆಗ್ರಿಗೇಷನ್ ಕ್ಯಾಂಪ್‌ನಲ್ಲಿ ಇಡಬೇಕು. ನಿಮ್ಮ ಕಣ್ಣಿಗೆ ಯಾರಾದರೂ ಬಿದ್ದರೆ ಹೇಳಿ ಅವರನ್ನು ಸೆಗ್ರಿಗೇಷನ್ ಕ್ಯಾಂಪ್‌ನಲ್ಲಡುತ್ತೇವೆ.

ಶ್ರೀ ಆರ್. ಚಿಕ್ಕಯ್ಯ.—ಕುಷ್ಠರೋಗ ಇರುವ ಕಡೆ ನರ್ಸ್ ಮಾಡಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನ್ ನಾವು ಮಾಡುತ್ತಾ ಇದ್ದೇವೆ, ಕೇಂದ್ರ ಸರ್ಕಾರದವರು ಅದಕ್ಕೆ ಒಂದು ಸ್ಪೆಷರ್ ಸ್ಕ್ಯಾಡ್ ಇಟ್ಟಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸಯ್ಯ.—ತಮ್ಮ ಉತ್ತರದಲ್ಲಿ ಇದು ಸಾಂಕ್ರಾಮಿಕ ರೋಗ ಇಡೀ ಸಂಸ್ಥಾನದಲ್ಲಿ ಇದೆ ಎಂದು ಒಪ್ಪಿಕೊಂಡಿದ್ದೀರಿ, ಬೆಂಗಳೂರಿನಲ್ಲಿ ಒಂದು ಸೆಂಟ್ರಲ್ ಲೆಪ್ರಸಿ ಇನ್ಸ್‌ಟ್ಯೂಟ್ ಅನ್ನು ತೆಗೆಯುತ್ತಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಬೆಂಗಳೂರಿನಲ್ಲಿ ಆ ಇನ್‌ಸ್ಟಿಟ್ಯೂಟನ್ನು ತೆಗೆಯಬೇಕಾದುದು ಅನಾವಶ್ಯಕ, ಎಲ್ಲೆಲ್ಲಿ ಹೆಚ್ಚಾಗಿದೆಯೋ ಅಂಥ ಕಡೆ ತೆಗೆಯುವುದು ಅವಶ್ಯಕ. ಬೀದರ್‌ನಲ್ಲಿ ಒಂದು ದೊಡ್ಡ ಕೇಂದ್ರ ಮಾಡಿದ್ದೇವೆ. ಕೊಳ್ಳೆಗಾಲದಲ್ಲಿ ಇದೆ, ಎಲ್ಲ ಹೆಚ್ಚಾಗಿ ಈ ಖಾಯಿಲೆ ಇದೆ ಅಲ್ಲಿ ಕೇಂದ್ರ ತೆಗೆಯುವುದು ಒಳ್ಳೆಯದು, ಬೆಂಗಳೂರಿನಲ್ಲಿ ಈ ಖಾಯಿಲೆ ಇಲ್ಲದವರಿಗೆ ಏತಕ್ಕೆ ತಂದು ಹಡ್ಡೋಣ.

ಬಿ. ವಿ. ಕಕ್ಕಿಲ್ಲಾಯ.—ಬೆಂಗಳೂರಿನ ಅಣ್ಣಮ್ಮ ಗುಡಿಯ ಹತ್ತಿರ, ಸಾದತ್ತಿಯ ಎಲ್ಲಮ್ಮ ಗುಡಿಯ ಹತ್ತಿರ ಮತ್ತು ಅವುಗಳ ಮುಂದುಗಡೆ ಈ ರೋಗದ ಜನರು ಭಿಕ್ಷೆ ಕೇಳುತ್ತಿರುತ್ತಾರೆ, ಆದ್ದರಿಂದ ಇದನ್ನು ಏನಾದರೂ ತಾವು ಹತೋಟಿಗೆ ತರುವ ವಿಚಾರ ಇದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ವಿಚಾರಮಾಡಿ ಕಾನೂನಲ್ಲಿ ಇದನ್ನು ತಡೆಗಟ್ಟುವುದಕ್ಕೆ ಅವಕಾಶ ಇಲ್ಲದಿದ್ದರೆ ಅವಕಾಶ ಮಾಡಿಕೊಳ್ಳೋಣ.

Encroachment of Land Belonging to the School of Sokkegrama

96. Sri HANJI SHIVANNA (Tarikere).—

Will the Minister for Education be pleased to state :—

(*a*) whether it is a fact that the land belonging to school of Sokkegrama in Tarikere taluk has been encroached and fences built ;

(*b*) whether it is a fact that even though the Philanthropists of the town have come forward to donate for construction of two school rooms, the work has come to standstill due to such fencing ;

(*c*) whether it is a fact that the villagers have been requesting the Government since many years to evict the encroachers and thus make available the land for school building ;

(*d*) whether it is not possible for Government to evict the encroachers from the land, if possible, the period in which the same will be made available ?

Sri A. R. BADARINARAYANA (Minister for Education).—

(*a*) Yes.

(*b*) Yes, the villagers have stated like that.

(*c*) Yes, the villagers have so requested.